Karnatak Law Society's
**Vishwanathrao Deshpande Institute of Technology**
(Approved by AICTE, New Delhi. Affiliated to VTU, Belagavi)
(Recognised Under Section 2(f) by UGC, New Delhi)
Udyog Vidya Nagar, Haliyal – 581329, Dist: Uttar Kannada (Karnataka)
Phone: 08284-220861, 220334, 221409, Fax: 08284-220813
www.klsvdit.edu.in principal@klsvdit.edu.in

Date: 08-07-2022

**ಪತ್ರಿಕಾ ಪ್ರಕಟಣೆ:**

## ನವೋದ್ಯಮ ಸ್ಥಾಪನೆ ಕುರಿತು ಪ್ರಾಯೋಗಿಕ ಕಾರ್ಯಾಗಾರ

ಕೆ.ಎಲ್.ಎಸ್. ವಿ.ಡಿ.ಐ.ಟಿ. ಹಳಿಯಾಳದಲ್ಲಿ ಜುಲೈ 7 ಮತ್ತು 8 ರಂದು ವಿದ್ಯಾರ್ಥಿಗಳು ಔದ್ಯಮಶೀಲರಾಗಲು ಪೂರಕವಾಗುವ ನವೋದ್ಯಮ (ಸ್ಟಾರ್ಟ್-ಅಪ್) ಎಂಬ ವಿಷಯದ ಕುರಿತು ಪ್ರಾಯೋಗಿಕ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

ಪಂಜೂರ್ಲಿ ಲ್ಯಾಬ್ಸ್ ಪ್ರೈ. ಲಿ. ಬೆಂಗಳೂರಿನ ವ್ಯವಸ್ಥಾಪಕ ನಿರ್ದೇಶಕರು ಹಾಗೂ 2020ನೇ ಸಾಲಿನ ಯುವ ಸಾಧಕ ಪ್ರಶಸ್ತಿಗೆ ಭಾಜನರಾದ ಶ್ರೀ ಆಶಿಕ ಎಸ್. ವಿ. ಅವರು ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿಭಾಗವಹಿಸಿ ಮಾತನಾಡುತ್ತಾ, ಕಲ್ಪನೆಯನ್ನು ಮಾರುಕಟ್ಟೆ ಉತ್ಪನ್ನವಾಗಿಸುವುದರ ಹಿಂದಿರುವ ಸವಾಲುಗಳೇನು ಮತ್ತು ಉತ್ಪನ್ನವನ್ನು ಮಾರುಕಟ್ಟೆಗೆ ಪರಿಚಯಿಸುವುದರ ಪರಿಯನ್ನು ಸವಿಸ್ತಾರವಾಗಿ ವಿವರಿಸಿದರು. ಉದ್ಯಮಶೀಲರಾಗಿ ಹೊರಹೊಮ್ಮಿ ಯಶಸ್ವಿಗೊಳ್ಳುವಂತೆ ಕರೆನೀಡಿದರು. ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ವಿ. ಎ. ಕುಲಕರ್ಣಿ ಅವರು ಮಾತನಾಡುತ್ತಾ ವಿದ್ಯಾರ್ಥಿಗಳ ಕಲ್ಪನೆಯನ್ನು ಮಾರುಕಟ್ಟೆ ಉತ್ಪನ್ನವಾಗಿಸಲು ಬೇಕಾಗುವ ಸೌಕರ್ಯ ಹಾಗೂ ಸೌಲಭ್ಯವನ್ನು ಮಹಾವಿದ್ಯಾಲಯವು ಒದಗಿಸಲು ಸಿದ್ಧವಾಗಿದೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳುವಂತೆ ನುಡಿದರು. ಮಹಾವಿದ್ಯಾಲಯ ಪಂಜೂರ್ಲಿ ಲ್ಯಾಬ್ಸ್ ಪ್ರೈ. ಲಿ. ಬೆಂಗಳೂರು ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಿದೆ ಎಂದು ಇದೇ ಸಂದರ್ಭದಲ್ಲಿ ಘೋಷಿಸಿದರು.

ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥರಾದ ಡಾ. ಕೆ. ಎಸ್. ಪೂಜಾರ್ ಸ್ವಾಗತಿಸಿದರು. ಡಾ. ಮುರುಗಯ್ಯ ಹೆಚ್ ವಂದಿಸಿದರು. ಪ್ರೊ. ನವೀನ್ ಹೆಚ್ ನಿರೂಪಿಸಿದರು. ಪ್ರೊ. ಎಸ್.ಡಿ. ಕುಲಕರ್ಣಿ (ಡೀನ್ ಎಫ್. ಐ. ಐ. ಐ) ವೇದಿಕೆ ಮೇಲೆ ಉಪಸ್ಥಿತರಿದ್ದರು. ಎರಡು ದಿನದ ಈ ಕಾರ್ಯಾಗಾರದಲ್ಲಿ ಸ್ಟಾರ್ಟ್ ಅಪ್ ನ ವಿವಿಧ ಹಂತದ ಕುರಿತು ಪ್ರಾಯೋಗಿಕವಾಗಿ ತರಬೇತಿ ನೀಡಿದರು. ಮಹಾವಿದ್ಯಾಲಯದ ವಿವಿಧ ವಿಭಾಗದ 150ಕ್ಕೂ ಅಧಿಕ ವಿದ್ಯಾರ್ಥಿಗಳು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.ಮಹಾವಿದ್ಯಾಲಯದ ಮೆಕ್ಯಾನಿಕಲ್ ವಿಭಾಗವು ಈ ಕಾರ್ಯಾಗಾರವನ್ನು ಆಯೋಜಿಸಿತ್ತು.

ಪ್ರಾಂಶುಪಾಲರು

**Principal**
KLS Vishwanathrao Deshpande
Institute of Technology, Haliyal


KLS VDIT
Start-up
Workshop